ಈ ಮೇಲೆ ತಿಳಿಸಿದ ಲೆವಿ ಸಕ್ಕರೆ ದರ ವ್ಯತ್ಯಾಸದ ಹಣವನ್ನು ಆಹಾರ ಮತ್ತು ಸಾರಿಗೆ ಇಲಾಖೆಯು ಬಿಡುಗಡೆ ಮಾಡಬೇಕಾಗಿದ್ದು ಸದರಿ ಬಾಕಿ ಹಣವನ್ನು ಮೇಲ್ಕಂಡ ಸಹಕಾರ ಸಂಘಗಳಿಗೆ ಕೂಡಲೇ ಬಿಡುಗಡೆ ಮಾಡಲು ತೀವ್ರ ಕ್ರಮ ತೆಗೆದುಕೊಳ್ಳುವಂತೆ ಆ ಇಲಾಖೆಗೆ ತಿಳಿಸಲಾಗುವುದು.

ರಾಜ್ಯ ಸರ್ಕಾರವು ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘಗಳಿಗೆ ಅವುಗಳ ಷೇರು ಬಂಡವಾಳವನ್ನು ಬಲಪಡಿಸಲು ಷೇರು ಬಂಡವಾಳ ಮಂಜೂರು ಮಾಡುವ ಯೋಜನೆ ಬಂದಿದೆ. ಈ ಯೋಜನೆಯಡಿಯಲ್ಲಿ ಚನ್ನಪಟ್ಟಣ ತಾಲ್ಲೂಕು ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘಕ್ಕೆ ರೂ.2 ಲಕ್ಷಗಳನ್ನು ಸರ್ಕಾರ ಮಂಜೂರು ಮಾಡಿದೆ.

1.05 ಪಿ.ಎಂ.

3) ಜಯನಗರ ಬಸ್ ನಿಲ್ದಾಣದಿಂದ ಮೈಸೂರಿಗೆ ಬಸ್ ಸೌಕರ್ಯ ಒದಗಿಸುವುದು

ಶ್ರೀ ರಾಮಲಿಂಗರೆಡ್ಡಿ (ಜಯನಗರ) – ಬೆಂಗಳೂರು ಜಯನಗರ ಬಸ್ ನಿಲ್ದಾಣದಿಂದ ಈಗ ಪ್ರತಿದಿನ ಬೆಳಿಗ್ಗೆ 6.30 ಕ್ಕೆ ಒಂದು ತಡೆರಹಿತ ಬಸ್ಸನ್ನು ಬೆಂಗಳೂರು - ಮೈಸೂರು ನಡುವೆ ಓಡಿಸಲಾಗುತ್ತಿದೆ. ಇದರ ಜೊತೆಗೆ ಬೆಳಿಗ್ಗೆ 9 ಘಂಟೆಗೆ ಹಾಗೂ ಸಂಜೆ 6 ಘಂಟೆಗೆ ಒಂದೊಂದು ತಡೆರಹಿತ ಬಸ್ಸನ್ನು ಬೆಂಗಳೂರು-ಮೈಸೂರು ನಡುವೆ ಓಡಿಸಬೇಕು. ಈ ಬಸ್‌ಗಳಲ್ಲಿ ಜಾಗವಿದ್ದರೆ ಜಯನಗರ ಬಸ್ ನಿಲ್ದಾಣದಿಂದ ಬೆಂಗಳೂರು ಬಸ್ ನಿಲ್ದಾಣಕ್ಕೆ ಹೋಗಿ ಅಲ್ಲಿಂದ ಪ್ರಯಾಣಿಕರನ್ನು ತುಂಬಿಸಿಕೊಂಡು ಮೈಸೂರಿಗೆ ಹೋಗುವ ವ್ಯವಸ್ಥೆ ಮಾಡಬೇಕು. ಇದರಿಂದ ಜಯನಗರ, ಬನಶಂಕರಿ, ಬಸವನಗುಡಿ, ಹನುಮಂತನಗರ ಮುಂತಾದ ಭಾಗಗಳಲ್ಲಿರುವ ನಾಗರೀಕರಿಗೆ ಅನುಕೂಲವಾಗುವುದು. ಇದರ ಜೊತೆಗೆ ರಾತ್ರಿ 9 ಘಂಟೆಯ ನಂತರ ಮೈಸೂರಿನಿಂದ ಬೆಂಗಳೂರನ್ನು ತಲುಪುವ ಎಲ್ಲಾ ತಡೆರಹಿತ ಬಸ್‌ಗಳನ್ನು ಬೆಂಗಳೂರು ಬಸ್ ನಿಲ್ದಾಣದಿಂದ ಜಯನಗರದವರೆಗೂ ಹೋಗುವಂತೆ ಕ್ರಮ ಕೈಗೊಂಡರೆ ಅದರಿಂದ ಪ್ರಯಾಣಿಕರಿಗೆ ಬಹಳ ಅನುಕೂಲವಾಗುತ್ತದೆ. ಸನ್ಮಾನ್ಯ ಸಾರಿಗೆ ಸಚಿವರು ಈ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಕೋರುತ್ತೇನೆ.

SRI AJIJ SAIT (Transport Minister) :–At present, the K.S.R.T.C. is operating 32 non–stop schedules between Bangalore and Mysore performing 128 single trips daily. In addition 8 Delux Schedules perform 32 single trips. Out of these services, one trip (Ordinary Coach) is being operated from Jayanagar Bus Station departing at 0645 hours to Mysore via Bangalore Bus Station. The service was introduced with effect from 29.10.1984.

An average of 22 passengers have boarded the bus at Jayanagar Bus Station for the period from 8th Feb. 1992 to 5th March 1992, whereas the carrying capacity of the bus is 54 seats. This works out to only 41% load factor. This clearly indicates that there is no need for operation of additional services from Jayanagar for the present.

The KSRTC has provided City services from Bangalore Bus Station to Jayanagar Bus stand and Jayanagar 9th Block. the last departure from Bangalore Bus Station is at 2315 hours. Intending passengers may avail these services from Bangalore Bus Station to Jayanagar. There is therefore no need to extend Mysroe – Bangalore non–stop services upto Jayanagar after 2100 hours.